**ಅಸಲು ದಾವಾ ಸಂಖ್ಯೆ- 46/2017**

**ಪ್ರತಿವಾದಿ ಸಾಕ್ಷಿ - 1**

**ಮಧ್ಯಕಾಲೀನ ಅರ್ಜಿ ಸಂಖ್ಯೆ 6 ಮತ್ತು 7ರ ಆದೇಶದ ಮೆರೇಗೆ ದಿನಾಂಕ 20-03-2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು**

**ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ ಆರ್. ಜಿ. ಸಂಜವಾದಮಠರವರಿಂದ.**

1 ನೇ ಪ್ರತಿವಾದಿಯಾದ ಅಪ್ಪಾ ಸಾಹೇಬ ರುದ್ರಗೌಡ ಬಿರಾದಾರ ನನ್ನ ತಮ್ಮ ಅಂದರೆ ನನ್ನ ತಂದೆಯ 2 ನೇ ಹೆಂಡತಿ ಮಗ. 2 ನೇ ಪ್ರತಿವಾದಿಯು 1 ನೇ ಪ್ರತಿವಾದಿಯ ಹೆಂಡತಿ ಎಂದರೆ ಸರಿ. ವಾದಿಯು 1 ಮತ್ತು 2 ನೇ ಪ್ರತಿವಾದಿಗಳ ಮಗಳು ಎಂದರೆ ಸರಿ.

ನಾನು ಮಾಗಣಗೇರಾ ಗ್ರಾಮದ ಸರ್ವೆ ನಂಬರ್ 293 ರಲ್ಲಿನ 10-18 ಎಕರೆಯನ್ನ ಸುಮಾರು 4 ವರ್ಷಗಳ ಹಿಂದೆ ಖರೀದಿ ಹಿಡಿದಿರುತ್ತೇನೆ. ನಾನು ಖರೀದಿ ಹಿಡಿದಿರುವ ಜಮೀನು 1 ನೇ ಪ್ರತಿವಾದಿಗೆ ಆತನ ತಂದೆಯಿಂದ ಬಂದಿದೆ ಎಂದರೆ ಸರಿ. ಖರೀದಿ ಪತ್ರಕ್ಕೆ ವಾದಿ ಮತ್ತು 2 ನೇ ಪ್ರತಿವಾದಿ ಸಹಿ ಮಾಡಿಲ್ಲ ಎಂದರೆ ಸರಿ. ದಾವಾ ಸಮನ್ಸನ್ನ ಸ್ವೀಕರಿಸಿದ ನಂತರ ನಾನು ಖರೀದಿಸಿದ ಜಮೀನನ್ನ ನನ್ನ ಮಗಳಾದ 4 ನೇ ಪ್ರತಿವಾದಿ ಸಿದ್ದಮ್ಮಳಿಗೆ ಬಕ್ಷೀಸು ಮಾಡಿದ್ದೇನೆ ಎಂದರೆ ಸರಿಯಲ್ಲ.

ಸಾಕ್ಷಿಗೆ ಈ ಹಂತದಲ್ಲಿ ದಿನಾಂಕ 24-08-2017 ರ ಬಕ್ಷೀಸು ಪತ್ರವನ್ನ ತೋರಿಸಲಾಗಿ ಅದನ್ನ ತಾನೇ 4 ನೇ ಪ್ರತಿವಾದಿ ಪರವಾಗಿ ಬರೆದುಕೊಟ್ಟಿದ್ದೇನೆ ಎಂದು ಒಪ್ಪಿಕೊಂಡಿದ್ದರಿಂದ ಅದನ್ನ ನಿಪಿ-11 ಎಂದು ಗುರುತಿಸಲಾಯಿತು.

4 ನೇ ಪ್ರತಿವಾದಿಯ ವಿವಾಹ ಆಗಿರುತ್ತದೆ. ವಾದಿಗೆ ದಾವಾ ಜಮೀನಿನಲ್ಲಿ ಹಿಸ್ಸೆ ನೀಡುವುದನ್ನ ತಪ್ಪಿಸಿಕೊಳ್ಳುವ ಸಲುವಾಗಿ 4 ನೇ ಪ್ರತಿವಾದಿ ಪರವಾಗಿ ನಿಪಿ-11 ನ್ನ ಬರೆದುಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ದಾವಾ ಜಮೀನಿನಲ್ಲಿ ಇರುವ ಹಿಸ್ಸೆಯ ಹಕ್ಕನ್ನ ಎತ್ತಿ ಹಾಕುವ ಉದ್ದೇಶದಿಂದ ದಾಖಲೆಗಳನ್ನ ಸೃಷ್ಟಿಸಿ ಹಾಜರು ಮಾಡಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ

**ಮರು ವಿಚಾರಣೆಃ ಇರುವುದಿಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೆ.ಸರಿ.ಇದೆ.**

**ಹಿರಿಯ ಶ್ರೇಣಿ ದಿವಾನಿ ನ್ಯಾಯಾಧೀಶರು**

**ಜೇವರ್ಗಿ**